
ವಸುಧೇಂದ್ರ

## ಜೆಸಿಬಿ ಬಹುಮಾನ ಪಡೆದ 'ಜಾಸ್ಮಿನ್ ಡೇಸ್'

# ಅರಬ್ ದೇಶಗಳ ಸಂಕಷ್ಟಗಳ ನಿರೂಪಣೆ




**ಮಲಯಾಳಂ ಲೇಖಕ ಬೆನ್ಯಾಮಿನ್ ಅವರ 'ಜಾಸ್ಮಿನ್ ಡೇಸ್' ಕೃತಿಗೆ ಜೆಸಿಬಿ ಕೊಡುವ 25 ಲಕ್ಷ ರೂಪಾಯಿಗಳ ಬಹುಮಾನ ಬಂದಿದೆ. ಬಹುಮಾನ ಹಾಗೂ ಕೃತಿಯ ಕುರಿತ ನುಡಿನೋಟ ಇಲ್ಲಿದೆ**

ದೇಶದ ಇಂಗ್ಲಿಷ್ ಪುಸ್ತಕೋದ್ಯಮದಲ್ಲಿ ಇತ್ತೀಚಿನ ಕೆಲವು ಬೆಳವಣಿಗೆಗಳು ಗಮನಾರ್ಹವಾಗಿವೆ. ಕನ್ನಡದ ವಿವೇಕ ಶಾನಭಾಗರ 'ಘಾಚರ್ ಘೋಚರ್' ಕಾದಂಬರಿಗೆ ಇಂಗ್ಲಿಷ್ ಓದುಗರು ಅಭೂತಪೂರ್ವ ಪ್ರೀತಿಯನ್ನು ತೋರಿಸಿದ್ದಾರೆ. ಈ ಹಿಂದೆ ಕನ್ನಡದ ಯಾವುದೇ ಕೃತಿಗೆ ಇಂತಹ ಮನ್ನಣೆ ದೊರಕಿದ ಇತಿಹಾಸವಿಲ್ಲ. ತಮಿಳಿನ ಪೆರುಮಾಳ್ ಮುರುಗನ್ ಅವರ ಹಲವು ಕೃತಿಗಳು ಇಂಗ್ಲಿಷ್ ಓದುಗರಿಗೆ ಅಚ್ಚರಿಯನ್ನು ಮೂಡಿಸಿವೆ. ನಗರದ ಮೇಲ್ವರ್ಗದ ಬದುಕನ್ನೇ ಓದಿಕೊಂಡಿದ್ದ ಅವರಿಗೆ, ಈ ದೇಶೀ ಜಗತ್ತಿನ ದಿವ್ಯದರ್ಶನ ದಿಗ್ಭ್ರಮೆ ಮೂಡಿಸಿದೆ. ಅಂತರರಾಷ್ಟ್ರೀಯ ಪ್ರಕಾಶಕರು ಅವರ ಪುಸ್ತಕಗಳ ಮುದ್ರಣಕ್ಕೆ ಮುಂಗಡ ನೀಡುತ್ತಿದ್ದಾರೆ. ಈಗ ಆ ವಿದ್ಯಾಮಾನಕ್ಕೆ ಕಳಶವಿಟ್ಟಂತೆ ಮಲಯಾಳಂ ಕಾದಂಬರಿಕಾರ ಬೆನ್ಯಾಮಿನ್ ಅವರ 'ಜಾಸ್ಮಿನ್ ಡೇಸ್' ಕೃತಿಗೆ ಜೆಸಿಬಿಯ ದೊಡ್ಡ ಮೊತ್ತದ ಪ್ರಶಸ್ತಿಯು ಬಂದಿದೆ. ಆ ಪ್ರಶಸ್ತಿಯ ಆಯ್ಕೆ ಸಮಿತಿಗೆ ಕನ್ನಡ  ಲೇಖಕ ವಿವೇಕ